ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE : 9/9/2020

# ಪ್ರಶ್ನೋತ್ತರ ಕಲಾಪದ ಮಹತ್ವವೇನು?

ಸಂಸತ್ತಿನ ಮುಂಗಾರು ಅಧಿವೇಶನವು ಈ ತಿಂಗಳ ಸೆಪ್ಟೆಂಬರ್ 12ರಿಂದ ಪ್ರಾರಂಭವಾಗುತ್ತದೆ ಎನ್ನಲಾಗಿದೆ. ಕರೋನಾ ಕಾರಣ ದಿಂದಾಗಿ ಕಲಾಪದಲ್ಲಿ ಹಲವು ಬದಲಾವಣೆ ಮಾಡಲಾಗಿದೆ. ಇದರ ಭಾಗವಾಗಿ ಪ್ರಶ್ನೋತ್ತರ ಅವಧಿಯನ್ನು ರದ್ದು ಪಡಿಸಲಾಗಿದೆ. ಏನಿದು ಪ್ರಶ್ನೋತ್ತರ ಅವಧಿ ಹಾಗೂ ಇದರ ಮಹತ್ವ ಇತ್ಯಾದಿ ವಿವರ ಇಲ್ಲಿದೆ.

## ಪ್ರಶ್ನೆಗಳ ಸ್ವರೂಪ

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕ ಉತ್ತರವನ್ನು ನಿರೀಕ್ಷಿಸಲಾಗುತ್ತದೆ. ಮುಖ್ಯ ಪ್ರಶ್ನೆಗೆ ಸಚಿವರು ಉತ್ತರಿಸಿದ ಮೇಲೆ ಸ್ಪೀಕರ್ ಅನುಮತಿಯ ಮೇರೆಗೆ ಸದಸ್ಯರು ಪೂರಕ ಪ್ರಶ್ನೆಯನ್ನು ಕೇಳಲು ಅವಕಾಶವಿ ರುತ್ತದೆ. ಈ ಪ್ರಶ್ನೆಗಳನ್ನು ಹಸಿರು ಬಣ್ಣದಲ್ಲಿ ಮುದ್ರಿಸಲಾಗಿರುತ್ತದೆ. ಮತ್ತು ನಕ್ಷತ್ರ ಮಾದರಿಯಲ್ಲಿ ಗುರುತಿಸಲಾಗಿರುತ್ತದೆ.

**ಚುಕ್ಕೆ ಇಲ್ಲದ ಪ್ರಶ್ನೆಗಳು:** ಯಾರಿಗೆ ಲಿಖಿತ ರೂಪದ ಉತ್ತರ ಬೇಕಾಗಿರುತ್ತದೆಯೋ ಅವರು ಚುಕ್ಕೆ ಗುರುತಿಲ್ಲದ ಪ್ರಶ್ನೆಗಳನ್ನು ಕೇಳುತ್ತಾರೆ. ಉತ್ತರ ದೊರೆತ ಮೇಲೆ ಅದಕ್ಕೆ ಸಂಬಂಧಿಸಿದಂತೆ ಪೂರಕ ಪ್ರಶ್ನೆಗಳನ್ನು ಕೇಳಲು ಅವಕಾಶವಿರುವುದಿಲ್ಲ. ಹಾಗೆಯೇ ಸಚಿವರಿಗೆ ಉತ್ತರ ನೀಡಲು ನೋಟಿಸ್ ಅವಧಿಯನ್ನು ಕೂಡ ನೀಡಲಾಗಿರುತ್ತದೆ.

**ಜರೂರಾದ ಪ್ರಶ್ನೆಗಳು:** ಸಾರ್ವಜನಿಕವಾಗಿ ಮಹತ್ವವಾಗಿರುವ ಪ್ರಶ್ನೆಗಳನ್ನು ಈ ವರ್ಗಕ್ಕೆ ಸೇರಿಸಲಾ ಗುತ್ತದೆ. ಆದ್ದರಿಂದ ಕಡಿಮೆ ಅವಧಿಯ ನೋಟಿಸ್ ನೀಡಿ ಪ್ರಶ್ನೆಗಳನ್ನು ಕೇಳಬಹುದು. ಅಂದರೆ, ಪ್ರಶ್ನೆ ಕೇಳಿದ ಹತ್ತು ದಿನಗಳೊಳಗೆ ಉತ್ತರವನ್ನು ಪಡೆದುಕೊಳ್ಳಬಹುದು.

## ಯಾವ ಬಗೆಯ ಪ್ರಶ್ನೆ ಕೇಳುತ್ತಾರೆ?

ಸಂಸದರಿಂದ ಕೇಳಲಾಗುವ ಪ್ರಶ್ನೆಗಳ ಬಗೆಯ ಬಗ್ಗೆ ಸಂಸದೀಯ ನಿಯಮಗಳು ಮಾರ್ಗಸೂಚಿಗಳನ್ನು ಒಳಗೊಂಡಿದೆ. ಅದರಂತೆ ಪ್ರಶ್ನೆಯು 150 ಪದಗಳಿಗೆ ಸೀಮಿತವಾಗಿರಬೇಕು. ಅಂದರೆ ಪ್ರಶ್ನೆ ತೀರಾ ಸಾಮಾನ್ಯದ್ದಾಗಿರಬಾರದು. ಅದೇ ರೀತಿ ಪ್ರಶ್ನೆಯು ಭಾರತ ಸರಕಾರದ ಜವಾಬ್ದಾರಿಗೆ ಸಂಬಂಧಿಸಿದ್ದಾಗಿರಬೇಕು. ಅಲ್ಲದೆ ರಹಸ್ಯ ವಿಷಯಗಳು ಹಾಗೂ ನ್ಯಾಯಾಲಯಗಳ ವಿಚಾರಣೆಯಲ್ಲಿರುವ ಪ್ರಕರಣದ ಕುರಿತು ಪ್ರಶ್ನೆಗಳನ್ನು ಕೇಳುವಂತಿಲ್ಲ. ಎರಡೂ ಮನೆಗಳ ಹಿರಿಯ ಅಧಿಕಾರಿಗಳು ಸಂಸದರು ಕೇಳುವ ಪ್ರಶ್ನೆಗಳನ್ನು ಅಂತಿಮವಾಗಿ ನಿರ್ಧರಿಸುತ್ತಾರೆ.

## ಈ ಹಿಂದೆ ರದ್ದು ಪಡಿಸಿದ ನಿದರ್ಶನ ಇದೆಯೇ?

1962ರಲ್ಲಿ ಪ್ರಶ್ನೋತ್ತರ ಅವಧಿ ಇಲ್ಲದೇ ಅಧಿವೇಶನ ನಡೆಸಲಾಗಿತ್ತು. ಆಗ ಚೀನಾ ದಾಳಿ ನಡೆಸಿದ್ದರಿಂದ ಅಧಿವೇಶನ ಕರೆಯಲಾಗಿತ್ತು. ಸದನ 12 ಗಂಟೆಗೆ ಆರಂಭವಾಗಿತ್ತು. ಪ್ರಶ್ನೋತ್ತರ ಕಲಾಪಕ್ಕೆ ಅವಕಾಶ ನೀಡಿರಲಿಲ್ಲ. ಆಡಳಿತ ಮತ್ತು ಪ್ರತಿ ಪಕ್ಷಗಳ ನಡುವಿನ ಒಪ್ಪಂದದ ಪ್ರಕಾರವೇ ಪ್ರಶ್ನೋತ್ತರ ಅವಧಿಯನ್ನು ರದ್ದುಪಡಿಸಲಾಗಿತ್ತು. ಆದರೆ ಈಗ ರದ್ದುಪಡಿಸಿರುವುದಕ್ಕೆ ಪ್ರತಿಪಕ್ಷಗಳಿಂದ ವ್ಯಾಪಕ ಪ್ರತಿರೋಧ ವ್ಯಕ್ತವಾಗಿದೆ. 13ಮೇ, 1952ರಂದು ಮೊದಲ ಬಾರಿಗೆ ಅಧಿವೇಶನ ಸೇರಿದ್ದಾಗ 26 ಮೇವರೆಗೂ ಪ್ರಶ್ನೋತ್ತರ ಅವಧಿಗೆ ಅವಕಾಶ ಕಲ್ಪಿಸಿರಲಿಲ್ಲ.



## ಶೂನ್ಯ ವೇಳೆ ಎಂದರೇನು?

ಪ್ರಶ್ನೋತ್ತರ ಅವಧಿ ಸಂಪೂರ್ಣವಾಗಿ ಶಾಸನಬದ್ಧವಾದ ಪ್ರಕ್ರಿಯೆಯಾದರೆ, ಶೂನ್ಯ ವೇಳೆ ಎಂಬುದು ಭಾರತೀಯ ಸಂಸದೀಯ ವ್ಯವಸ್ಥೆಯ ಆವಿಷ್ಕಾರ ಎನ್ನಬಹುದು. ನಿಯಮಗಳ ಪುಸ್ತಕದಲ್ಲಿ ಈ ಪದ ಸಿಗಲಾರದು. ಭಾರತೀಯ ಸಂಸತ್ತಿನ ಮೊದಲ ದಶಕದಲ್ಲಿ ಶೂನ್ಯವೇಳೆ ಪರಿಕಲ್ಪನೆಯ ಆರಂಭವಾಯಿತು. ರಾಷ್ಟ್ರೀಯ ಸಮಸ್ಯೆಗಳು ಮತ್ತು ತಮ್ಮ ಕ್ಷೇತ್ರದ ಪ್ರಮುಖ ವಿಷಯಗಳ ಚರ್ಚೆಗೆ ಪ್ರತ್ಯೇಕವಾದ ಸಮಯಬೇಕೆಂದು ಸಂಸದರು ಪಟ್ಟು ಹಿಡಿದಾಗ ಈ ಕಲ್ಪನೆ ಬಂತು. ಆರಂಭಿಕ ದಿನಗಳಲ್ಲಿ ಒಂದು ಗಂಟೆಗೆ ಸಂಸತ್ತು ಬ್ರೇಕ್ ತೆಗೆದುಕೊಳ್ಳುತ್ತಿತ್ತು. ಆದ್ದರಿಂದ ಪೂರ್ವ ಸೂಚನೆ ಇಲ್ಲದೇ ರಾಷ್ಟ್ರೀಯ ಸಮಸ್ಯೆಗಳ ಬಗ್ಗೆ ಮಾತನಾಡಲು 12 ಗಂಟೆಗೆ ಅವಕಾಶ ದೊರೆಯುತ್ತಿತ್ತು ಮತ್ತು ಒಂದು ಗಂಟೆಯಿಂದ ಸದನ ಊಟದ ಸಮಯಕ್ಕೆ ಮುಂದೂಡವರೆಗೂ ಮಾತನಾಡಬಹುದಾಗಿತ್ತು. ಈ ಅವಧಿ ಯೇ ಮುಂದೆ ಶೂನ್ಯ ವೇಳೆ ಎಂದು ಪ್ರಸಿದ್ಧಿಯಾಯಿತು. ಈ ಅವಧಿಯಲ್ಲಿ ಎತ್ತಲಾದ ವಿಷಯಗಳನ್ನು ಝೀರೋ ಅವರ್ ಸಬ್ಮಿಷನ್ ಎಂದು ಹೇಳಲಾಗುತ್ತದೆ. ವರ್ಷಗಳು ಕಳೆದಂತೆ, ಸಂಸತ್ತಿನ ಎರಡೂ ಸದನದ ಅಧ್ಯಕ್ಷರು ನಿರ್ದೇಶನಗಳನ್ನು ನೀಡುವ ಮೂಲಕ ಶೂನ್ಯವೇಳೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿಸಲು ಸಾಧ್ಯವಾಯಿತು. ಶೂನ್ಯವೇಳೆ, ನಿಯಮದ ಪುಸ್ತಕದ ಭಾಗ ಆಗದಿದ್ದರೂ, ಮಾಧ್ಯಮಗಳು, ಸಂಸದರು ಮತ್ತು ಅಧಿಕಾರಿಗಳ ಬೆಂಬಲದಿಂದಾಗಿ ತನ್ನದೇ ಆದ ಮಹತ್ವವನ್ನು ಸಂಪಾದಿಸಿದೆ.

## ಪ್ರಶ್ನೋತ್ತರ, ಶೂನ್ಯ ವೇಳೆಯ ವ್ಯತ್ಯಾಸ

- ಲೋಕಸಭೆಯಲ್ಲಿ ಸದಸ್ಯರು ಸರಕಾರವನ್ನು ಪ್ರಶ್ನಿಸುವ ಸದನದ ಆರಂಭದ ಮೊದಲಿನ ಒಂದು ಗಂಟೆ ಪ್ರಶ್ನೋತ್ತರ ಅವಧಿಯಾಗಿರುತ್ತದೆ.
- ಪ್ರಶ್ನೋತ್ತರ ಅವಧಿಯ ನಂತರ ತಕ್ಷಣವೇ ಶೂನ್ಯ ವೇಳೆ ಕಲಾಪ ಆರಂಭವಾಗುತ್ತದೆ.



## ಪ್ರಶ್ನೋತ್ತರ ಅವಧಿಯಲ್ಲಿ ಹಗರಣಗಳು ಬಯಲಿಗೆ

ಸಂಸತ್ತಿನ ಕಲಾಪದಲ್ಲಿ ಪ್ರಶ್ನೋತ್ತರ ಅವಧಿಗೆ ತುಂಬ ಮಹತ್ವವಿದೆ. ಇದು ಅಧಿವೇಶನದ ಹೃದಯವಿದ್ದಂತೆ. ಪ್ರಶ್ನೋತ್ತರ ಅವಧಿಯಲ್ಲಿ ಕೇಳಲಾದ ಪ್ರಶ್ನೆಗಳ ಫಲವಾಗಿಯೇ ಸರಕಾರ ನಡೆಸಿರುವ ಹಣಕಾಸು ಅಕ್ರಮಗಳು ಅವ್ಯವಸ್ಥೆಗಳು, ದುರಾಡಳಿತ, ಹಗರಣಗಳು ಬಯಲಿಗೆ ಬಂದ ವಿವರಗಳು ದಾಖಲೆಯಲ್ಲಿವೆ. ಉದಾಹರಣೆಗೆ, ಎರಡನೇ ಲೋಕಸಭೆ ಅವಧಿಯಲ್ಲಿ ಮುಂದ್ರಾ ಹಗರಣ ಬೆಳಕಿಗೆ ಬಂತು. ಸರಕಾರಿ ಸ್ವಾಮ್ಯದ ಜೀವ ವಿಮಾ ನಿಗಮವು ಹರಿದಾಸ್ ಮುಂದ್ರಾ ಕಂಪನಿಗಳಲ್ಲಿನ ಅನಧಿಕೃತ ಹೂಡಿಕೆಗೆ ಬಗ್ಗೆ ಸಂಸದ ಫಿರೋಜ್ ಗಾಂಧಿ ಪ್ರಶ್ನೋತ್ತರ ಅವಧಿಯಲ್ಲಿ ಪ್ರಶ್ನಿಸಿದ್ದರು. ಆಗ ವಿತ್ತ ಸಚಿವಾಲಯದಲ್ಲಿ ನಡೆದ ಹಗರಣ ಬೆಳಕಿಗೆ ಬಂತು. ಅಲ್ಲದೆ ಅಂದಿನ ಹಣಕಾಸು ಸಚಿವ ಟಿ ಟಿ ಕೃಷ್ಣಮಾಚಾರಿ ರಾಜೀನಾಮೆ ಕೊಡಬೇಕಾಯಿತು. ಪುದುಚೇರಿ ಲೈಸೆನ್ಸ್ ಹಗರಣ ಕೂಡ ಹೀಗೆಯೇ ಬೆಳಕಿಗೆ ಬಂದಿದ್ದು. 1974ರ ಸಂಸತ್ತಿನ ಕಲಾಪದಲ್ಲಿ ಕೇಳಲಾದ ಪ್ರಶ್ನೆಯೊಂದಲೇ ಪುದುಚೇರಿ ಲೈಸನ್ಸ್ ಹಗರಣ ಹೊರ ಜಗತ್ತಿಗೆ ಗೊತ್ತಾಯಿತು. ಹಲವು ವಸ್ತುಗಳನ್ನು ಆಮದು ಮಾಡಿಕೊಳ್ಳಲು ಅನುಮತಿ ನೀಡಲು ಕೋರಿ 21 ಸಂಸದರ ಸಹಿ ಇರುವ ಮನವಿ ಪತ್ರವೊಂದನ್ನು ಪುದುಚೇರಿ ವ್ಯಾಪಾರಿಗಳು ಕೇಂದ್ರ ವಾಣಿಜ್ಯ ಇಲಾಖೆಗೆ ಸಲ್ಲಿಸಿದ್ದರು. ಆದರೆ ಇಂದಿರಾ ಗಾಂಧಿಯ ಪ್ರಮುಖ ಒಡನಾಡಿಯಾಗಿದ್ದ ಲಲಿತ್‌ನಾರಾಯಣ ಮಿಶ್ರಾ ಅವರ ಆದೇಶದ ಮೇರೆಗೆ ಸಂಸದರ ಸಹಿಗಳನ್ನು ನಕಲಿ ಮಾಡಲಾಗಿತ್ತು. ಈ ವಿಷಯ ಪ್ರಶ್ನೋತ್ತರ ವೇಳೆಯಲ್ಲಿ ಬಯಲಾಗಿತ್ತು.